ಇ) *ಈ ಸಂಘಕ್ಕೆ ಸರ್ಕಾರ ಎಷ್ಟು ಜಮೀನನ್ನು ಮಂಜೂರು ಮಾಡಿದೆ (ಮಂಜೂರು ಮಾಡಿದ ದಿನಾಂಕ ಹಾಗೂ ಪೂರ್ತಿ ವಿವರ ಒದಗಿಸುವುದು)?*

ಈ) *ಈ ಸಂಘಕ್ಕೆ ಮಂಜೂರು ಮಾಡಿದ ಜಾಗವು ಸರ್ಕಾರಕ್ಕೆ ಸಂಬಂಧಪಟ್ಟಿದೆಯೇ ಅಥವಾ ಖಾಸಗಿಯವರಿಗೆ ಸಂಬಂಧಪಟ್ಟಿದೆಯೇ;*

ಉ) *ಹಾಗಿದ್ದಲ್ಲಿ, ಸರ್ಕಾರದಿಂದ ಮಾನ್ಯತೆ ಪಡೆದಿದೆಯೇ; ಹಾಗಿದ್ದಲ್ಲಿ ಯಾವ ದಿನಾಂಕ, ಇಸವಿ, ಪೂರ್ತಿ ವಿವರ ಕೊಡುವುದು?*

ಊ) *ಈ ಸಂಘವು ನಿವೇಶನ ಹರಡುವ ಕಾರ್ಯಕ್ರಮಕ್ಕೆ ಒಳಪಡುತ್ತದೆಯೆ. ಈ ಸಂಘವನ್ನು ಮೂರು ಜನ ಸದಸ್ಯರು ಕಮಿಟಿಯು ಹೌಸಿಂಗ್ ಸೊಸೈಟಿ ಅಲ್ಲವೆಂದು ತಿರಸ್ಕರಿಸಿದ್ದು ನಿಜವೇ (ವಿವರ ನೀಡುವುದು)?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ಸದರಿ ಸಂಘವು ಸಂಘದ ಸದಸ್ಯರಾದವರಿಗೆ ನಿವೇಶನ ಹಂಚುವ ಸಲುವಾಗಿ ಮತ್ತು ಸದಸ್ಯರ ಕಲ್ಯಾಣಕ್ಕೋಸರ ಸ್ಥಾಪನೆಗೊಂಡಿರುತ್ತದೆ. ಸದರಿ ಸಂಘದಲ್ಲಿ 525 ಹರಿಜನ ಸದಸ್ಯರು ಇರುತ್ತಾರೆ.

ಇ) ಸದರಿ ಸಂಘಕ್ಕೆ ಜಕ್ಕಸಂದ್ರ ಗ್ರಾಮದ ಸರ್ವೆ ನಂ. 45 ಮತ್ತು 47 ರಲ್ಲಿ ಒಟ್ಟು 34-03 ಎಕರೆ ಜಮೀನು ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 129 ಎಲ್.ಜಿ.ಬಿ. 78, ದಿನಾಂಕ 15-6-79ರ ಪ್ರಕಾರ ಮಂಜೂರು ಮಾಡಿರುತ್ತದೆ.

ಈ) ಸದರಿ ಜಮೀನು ದೇವದಾಯ ಇನಾಂತಿಯಾಗಿದ್ದು, ಇನಾಂ ರದ್ದಿಯಾತಿ ಕಾಯ್ದೆ ಪ್ರಕಾರ ಸರ್ಕಾರಕ್ಕೆ ನಿಹಿತಗೊಂಡ ನಂತರ ಸಹಕಾರ ಸಂಘಕ್ಕೆ ಮಂಜೂರಾಗಿದೆ.

ಉ) ಸದರಿ ಸಂಘವು ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರ ರಿಜಿಸ್ಟರ್ಡ್ ನಂ. ಎಸ್. 91 /68 - 69, ದಿನಾಂಕ 14-8-1968 ರಂದು ನೋಂದಣಿಯಾಗಿದ್ದು ಸರ್ಕಾರದ ಮಾನ್ಯತೆ ಪಡೆದಿರುತ್ತದೆ.

ಊ) ಈ ಸಂಘಕ್ಕೆ ನಿವೇಶನ ಹಂಚುವ ಉದ್ದೇಶಕ್ಕೋಸ್ಕರ ಸರ್ಕಾರಿ ಜಮೀನನ್ನು ಮಂಜೂರಿ ಮಾಡಿರುವ ಕಾರಣ ಸದರಿ ಸಂಘವು ನಿವೇಶನ ಹಂಚುವ ಕಾರ್ಯಕ್ರಮಕ್ಕೆ ಒಳಪಡುತ್ತದೆ. ದಿನಾಂಕ 12-10-87 ರಂದು ನಡೆದ ತ್ರಿಸದಸ್ಯರ ಸಭೆಯಲ್ಲಿ ಸದರಿ ಸಂಘವು ಗೃಹನಿರ್ಮಾಣ ಸಹಕಾರ ಸಂಘವಲ್ಲವೆಂಬ ಕಾರಣದಿಂದ ಭೂ ಸ್ವಾಧೀನತೆಗೆ ಅರ್ಹವಲ್ಲವೆಂದು ಭೂ ಸ್ವಾಧೀನ ಪ್ರಸ್ತಾವನೆ ಕೈಬಿಡಲು ತೀರ್ಮಾನಿಸಲಾಗಿರುತ್ತದೆ.

ಮೈಸೂರು ನಗರದ 547 ನಿವೇಶನಗಳ ಬಗ್ಗೆ.

1247 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಮೈಸೂರು ನಗರದ ಅಂದಿನ ನಗರಾಭಿವೃದ್ಧಿ ವಿಶ್ವಸ್ಥಮಂಡಳಿ ಮಂಜೂರು ಮಾಡಿದ್ದ 547 ಖಾಲಿ ನಿವೇಶನಗಳಿಗೆ ಸರ್ಕಾರ ನೀಡಿದ್ದ ತಡೆ ಆಜ್ಞೆ ತೆರವಾಗಿದೆಯೇ?

2) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

3) ಆರು ವರ್ಷಗಳಿಂದ ಈ ತಡೆಯಾಜ್ಞೆಯಿಂದ ನಿವೇಶನಗಳಿಂದ ವಂಚಿತರಾದ ಫಲಾನುಭವಿಗಳಿಗೆ ಸಹಾಯ ಮಾಡಲು ಸರ್ಕಾರ ತೆಗೆದುಕೊಂಡ ತುರ್ತು ಕ್ರಮವೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) 1984ನೇ ಇಸವಿಯಲ್ಲಿ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ಅಧ್ಯಕ್ಷರು ಮಂಜೂರು ಮಾಡಿರುವ 547 ನಿವೇಶನಗಳನ್ನು ಆದೇಶ ಸಂಖ್ಯೆ ಹೆಚ್ ಯು ಡಿ 7 ಎಂಐ ಬಿ 85 ದಿನಾಂಕ 17-6-1987ರಲ್ಲಿ ರದ್ದುಪಡಿಸಿದೆ.

ಆ) ಉದ್ಭವಿಸುವುದಿಲ್ಲ.

ಇ) ಸದರಿ ನಿವೇಶನಗಳ ಹಂಚಿಕೆಯನ್ನು ಸಕ್ರಮಗೊಳಿಸುವ ವಿಷಯ ಸರ್ಕಾರ ಪರಿಶೀಲನೆಯಲ್ಲಿದೆ.

ಕನಿಷ್ಠ ವೇತನಗಳನ್ನು ನಿಗದಿಗೊಳಿಸುವುದು.

1719 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕನಿಷ್ಠ ವೇತನವನ್ನು ನಿಗದಿ ಮಾಡದೇ ಇರುವ ವಿಭಾಗಗಳು ಯಾವುವು?

ಆ) ಈ ವಿಭಾಗಗಳಿಗೆ ಯಾವಾಗ ಕನಿಷ್ಠವೇತನವನ್ನು ನಿಗಧಿಗೊಳಿಸಲಾಗುವುದು.

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) :

ಅ) ಈ ಕೆಳಕಂಡ 13 ಷೆಡ್ಯೂಲ್ಡ್ ಉದ್ದಿಮೆಗಳಿಗೆ ಕನಿಷ್ಟ ವೇತನ ನಿಗದಿ ಮಾಡಿಲ್ಲ.

1. ರೆಗ್ಯೂಲೇಟೆಡ್ ಮಾರ್ಕೆಟ್ಸ್ ಅಂಡ್ ಮಂಡೀಸ್ ಅಂಡ್ ಬಜಾರ್ಸ್.
2. ವುಲನ್ ಅಂಡ್ ಕಾರ್‌ಪೆಟ್ ಮಾರ್ಕೆಟಿಂಗ್ ಅಥವಾ ಶಾಲ್ ವೀವಿಂಗ್ ಎಸ್ಟಾಬ್ಲಿಷ್‌ಮೆಂಟ್ಸ್.
3. ಮೆಟಿಲ್‌ರೂಲಿಂಗ್ ಅಂಡ್ ರೀ-ರೋಲಿಂಗ್ ಇಂಡಸ್ಟ್ರೀ (ಫೆರ್ರೋಸ್)
4. ಮೆಟಲ್ ರೂಲಿಂಗ್ ಅಂಡ್ ರೀ-ರೋಲಿಂಗ್ ಇಂಡಸ್ಟ್ರೀ (ನಾನ್- ಫೆರ್ರೋಸ್)
5. ಬಿಸ್ಕಟ್ಸ್.
6. ಮಿನಿ ಸಿಮೆಂಟ್ ಪ್ಲಾಂಟ್.
7. ರಬ್ಬರ್ ಪ್ರಾಡಕ್ಟ್ಸ್ (ಫೋಮ್ ಅಂಡ್ ಕ್ವಾಯರ್ ರಬ್ಬರೈಸ್ಡ್ ಪ್ರಾಡಕ್ಟ್ಸ್)
8. ಬ್ರಿಕ್ ಮ್ಯಾನುಫ್ಯಾಕ್ಚರರ್ಸ್.
9. ಪೆಟ್ರೋಲ್ ಅಂಡ್ ಡೀಸಲ್ ಆಯಿಲ್ ಪಂಪ್ಸ್
10. ಲಾಂಡ್ರೀಸ್
11. ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್ಸ್.
12. ಫಾರೆಸ್ಟ್ರಿ ಅಂಡ್ ಟಿಂಬರೈಸ್ಡ್ ಆಪರೇಷನ್.
13. ಹ್ಯಾಂಡ್‌ಲೂಮ್ ಪವರ್‌ಲೂಮ್ (ಕಾಟನ್) ಇಂಡಸ್ಟ್ರಿ

ಆ) ಈ ಕೆಳಕಂಡ 13 ಷೆಡ್ಯೂಲ್ಡ್ ಉದ್ದಿಮೆಗಳಲ್ಲಿ 6 ಉದ್ದಿಮೆಗಳಿಗೆ ಕನಿಷ್ಠ ವೇತನ ನಿಗದಿ ಮಾಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

1. ಬ್ರಿಕ್ ಮ್ಯಾನುಫ್ಯಾಕ್ಚರರ್ಸ್.
2. ಪೆಟ್ರೋಲ್ ಅಂಡ್ ಡೀಸಲ್ ಆಯಿಲ್ ಪಂಪ್ಸ್
3. ಲಾಂಡ್ರೀಸ್
4. ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್ಸ್
5. ಫಾರೆಸ್ಟ್ರೀ ಅಂಡ್ ಟಿಂಬರೈಸ್ಡ್ ಆಪರೇಷನ್.
6. ಹ್ಯಾಂಡ್ ಲೂಮ್ ಪವರ್ ಲೂಮ್ (ಕಾಟನ್) ಇಂಡಸ್ಟ್ರಿ.

ಉಳಿದ 7ಉದ್ದಿಮೆಗಳಿಗೆ ಕನಿಷ್ಟ ವೇತನ ನಿಗದಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.